ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು -1**

ಸಂಖ್ಯೆ ಸಿ8(1) ಶಾಶಿಅ ಖಾ ಹು ಭ ಇತರೆ 15 /2019-20 ದಿನಾಂಕ: 13-05-2019

**ಜ್ಞಾಪನ**

**ವಿಷಯ**:-ರಾಜ್ಯದಲ್ಲಿನ ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿ ಹುದ್ದೆ ಭರ್ತಿಗೆ ಅನುಮತಿ ಮತ್ತು ಅನುದಾನ ಸಹಿತವಾಗಿ ಅನುಮೋದಿಸುವ ಕುರಿತು.

**ಉಲ್ಲೇಖ**: 1. ಸರ್ಕಾರದ ಆದೇಶ ಸಂಖ್ಯೆ ಇಡಿ 14 ಎಸ್‌ಇಪಿ 2017 ದಿನಾಂಕ:06-03-2019
2. ಸರ್ಕಾರದ ಆದೇಶ ಸಂಖ್ಯೆ ಇಡಿ 14 ಎಸ್.ಇ.ಪಿ 2017 ದಿನಾಂಕ:29-06-2017
3. ಸರ್ಕಾರದ ಆದೇಶ ಸಂಖ್ಯೆ ಇಡಿ 14 ಎಸ್.ಇ.ಪಿ 2017 ದಿನಾಂಕ: 25-09-2018

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿನ ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ವಿವಿಧ ಕಾರಣಗಳಿಂದ ತೆರವಾದ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಉಲ್ಲೇಖ (2) ಮತ್ತು (3) ರಲ್ಲಿ ದಿನಾಂಕ: 31-12-2015 ರವರೆಗೆ ಅನುಮತಿಸಿದ್ದು, ಸದರಿ ಆದೇಶದಲ್ಲಿ ವಿಧಿಸಲಾದ ಶಾಲೆಯ 5 ವರ್ಷಗಳ ಸರಾಸರಿ ಫಲಿತಾಂಶವು ಜಿಲ್ಲಾ ಸರಾಸರಿ ಫಲಿತಾಂಶಕ್ಕೆ ಸಮಾನಾಂತರ ಅಥವಾ ಹೆಚ್ಚಿರಬೇಕೆಂಬ ಷರತ್ತನ್ನು ವಿಧಿಸಲಾಗಿತ್ತು. ಉಲ್ಲೇಖಿತ (1) ರ ಸರ್ಕಾರದ ಆದೇಶದಲ್ಲಿ ಅನುದಾನಿತ ಪ್ರೌಢಶಾಲೆಗಳಲ್ಲಿ ವಿವಿಧ ಕಾರಣಗಳಿಂದ ದಿನಾಂಕ:31-12-2015 ರವರೆಗೆ ಖಾಲಿಯಾದ ಬೋಧಕ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಶಾಲೆಯ ಎಸ್.ಎಸ್.ಎಲ್.ಸಿ ಫಲಿತಾಂಶವು ಜಿಲ್ಲಾ ಸರಾಸರಿ ಫಲಿತಾಂಶಕ್ಕೆ ಸಮನಾಗಿ ಅಥವಾ ಹೆಚ್ಚಿರಬೇಕೆಂಬ ಷರತ್ತನ್ನು ಸಡಿಲಿಸಿ ಪರಿಷ್ಕೃತ ಷರತ್ತನ್ನು ವಿಧಿಸಿ ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಿ ಆದೇಶಿಸಲಾಗಿದೆ.

ಆದ್ದರಿಂದ ಜಿಲ್ಲಾ ಉಪನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಉಲ್ಲೇಖಿತ (1) ರ ಸರ್ಕಾರದ ಆದೇಶದ ಷರತ್ತುಗಳನ್ನು ಕಡ್ಡಾಯವಾಗಿ ಪಾಲನೆಯಾಗಿರುವ ಬಗ್ಗೆ ಖಚಿತಪಡಿಸಿಕೊಂಡು **ಒಂದು ಪ್ರತ್ಯೇಕ ಅನುಪಾಲನ ವಹಿಯನ್ನು ತೆರೆದು** ತಮ್ಮ ವ್ಯಾಪ್ತಿಯ ಎಲ್ಲಾ ಖಾಸಗಿ ಅನುದಾನಿತ ಪ್ರೌಢಶಾಲೆಗಳ ವಿವರವನ್ನು ದಾಖಲಿಸಿ ಹಾಗೂ ಸಕ್ಷಮ ಪ್ರಾಧಿಕಾರವಾದ ಆಯುಕ್ತರು/ಅಪರ ಆಯುಕ್ತರಿಗೆ ಅನುಪಾಲನ ವರದಿಯನ್ನು ಎಸ್.ಎಸ್.ಎಲ್.ಸಿ ಫಲಿತಾಂಶ ಬಂದ ತಕ್ಷಣ ಸಲ್ಲಿಸಲು ತಿಳಿಸಿದೆ. ತಮ್ಮ ಕಾರ್ಯವ್ಯಾಪ್ತಿಯ ಅನುದಾನಿತ ಎಲ್ಲಾ ಶಿಕ್ಷಣ ಸಂಸ್ಥೆಗಳ ಫಲಿತಾಂಶದ ಬಗ್ಗೆ ವಿಶ್ಲೇಷಣೆ ನಡೆಸಿ ಸರ್ಕಾರಿ ಆದೇಶದಲ್ಲಿನ ಎಲ್ಲಾ ಷರತ್ತುಗಳನ್ನು ಪೂರೈಸಿರುವ ಬಗ್ಗೆ ಖಚಿತಪಡಿಸಿಕೊಂಡು ಷರತ್ತುಗಳನ್ನು ಪೂರೈಸುವಲ್ಲಿ ವಿಫಲವಾದ ಶಿಕ್ಷಣ ಸಂಸ್ಥೆ/ ಶಿಕ್ಷಕರುಗಳ ವಿರುದ್ಧ ಉಲ್ಲೇಖಿತ (1) ಸರ್ಕಾರದ ಆದೇಶದಲ್ಲಿ ವಿಧಿಸಿರುವ ಷರತ್ತಿನನ್ವಯ ಸೂಕ್ತ ಕ್ರಮ ವಹಿಸುವಂತೆ ತಿಳಿಸಿದೆ. ವಿಷಯ ಶಿಕ್ಷಕರ ಕುರಿತು ಕ್ರಮ ಕೈಗೊಂಡನಂತರ ಅವರ ಸೇವಾ ವಹಿಗಳಲ್ಲಿ ನಿಯಮಾನುಸಾರ ದಾಖಲು ಮಾಡುವುದು. ಶಾಲಾವಾರು, ವಿಷಯವಾರು ಹಾಗೂ ಕ್ರಮ ಕೈಗೊಂಡ ಶಿಕ್ಷಕವಾರು ವರದಿಯನ್ನು ಈ ಕಚೇರಿಗೆ ಸಲ್ಲಿಸುವುದು.

14/5

ನಿರ್ದೇಶಕರು(ಪ್ರೌಢ ಶಿಕ್ಷಣ)

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ / ಅನುದಾನಿತ ಖಾಸಗಿ ಪ್ರೌಢಶಾಲೆಗಳ ಆಡಳಿತ ಮಂಡಳಿಯವರಿಗೆ (**ಜಿಲ್ಲಾ ಉಪನಿರ್ದೇಶಕರ ಮೂಲಕ**)
3. ಹಿರಿಯ ಸಹಾಯಕ ನಿರ್ದೇಶಕರು- ಇ ಆಡಳಿತ ಶಾಖೆ ಇವರಿಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಕಚೇರಿ ಪ್ರತಿ